**ಸಿ.ಸಿ. ನಂ.292/2023**

<u>ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ</u>
<u>ನ್ಯಾಯಾಲಯ, ಹೊಸನಗರ .</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸತೀಶ್ | ಪಿ.ಡಬ್ಲ್ಯೂ- 2 |
| ತಂದೆಯ ಹೆಸರು | ಃ | ಗಣಪತಿ | ಸಿ.ಡಬ್ಲ್ಯೂ- 4 |
| ವಯಸ್ಸು | ಃ | 39 ವರ್ಷ | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ವ್ಯವಸಾಯ | ದಿಃ 11/6/2024 |
| ವಾಸ | ಃ | ಈಚಲುಕೊಪ್ಪ. | |

<u>ಮುಖ್ಯ ವಿಚಾರಣೆಃ- ಎಪಿಪಿ ರವರಿಂದಃ-</u>

ನಮ್ಮೂರಿನಲ್ಲಿ ಒಂದು ಜಮೀನು ವಿಚಾರವಾಗಿ ನಾನು ರಿಪ್ಪನ್‌ಪೇಟೆ ಪೋಲೀಸ್ ಠಾಣೆಗೆ ಹೋದಾಗ ಪೋಲೀಸರ ಕೋರಿಕೆ ಮೇರೆಗೆ ನಾನು ಎರಡು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಪೋಲೀಸರು ಈ ಕೇಸ್ ಗೆ ಸಂಬಂಧಿಸಿದಂತೆ ನನ್ನ ಸಮಕ್ಷಮ ಯಾವುದೇ ಸ್ಥಳ ಮಹಜರ್ ಮತ್ತು ನಕ್ಷೆ ತಯಾರಿಸಿರುವುದಿಲ್ಲ. ಸಾಕ್ಷಿಯು ನಿ.ಪಿ.-1 ಸ್ಥಳ ಮಹಜರ್ ಮತ್ತು ನಿ.ಪಿ.-2 ನಕ್ಷೆಯನ್ನು ನೋಡಿ ತಮ್ಮ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿ.ಪಿ.-1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು. ನಿ.ಪಿ.-1 ಮತ್ತು 2 ರಲ್ಲಿ ಬರೆದಿರುವ ವಿಚಾರ ಮತ್ತು ಈ ಕೇಸಿನ ವಿಚಾರ ನನಗೆ ಗೊತ್ತಿರುವುದಿಲ್ಲ.

(ಸಾಕ್ಷಿಯನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನು ಮಾಡಲು ಅನುಮತಿಯನ್ನು ನೀಡಬೇಕೆಂದು ಮಾನ್ಯ ಸಸಅ ರವರು ಕೋರಿದ್ದು, ಅನುಮತಿ ನೀಡಲಾಯಿತು. )

<u>ಪಾಟೀ ಸವಾಲುಃ-</u> ಮಾನ್ಯ ಸ.ಸ.ಅ. ರವರಿಂದ.

ದಿನಾಂಕ 17-11-2022 ರಂದು ರಿಪ್ಪನ್‌ಪೇಟೆಯ ಸಂತೆ ಮಾರ್ಕೆಟ್ ಹತ್ತಿರ ಪೋಲೀಸರು ನನಗೆ ಮತ್ತು ಚಾ.ಸಾ.-3 ರವರಿಗೆ ನೋಟೀಸ್ ಜಾರಿ ಮಾಡಿ ಈ ಪ್ರಕರಣದ ವಿದ್ಯಮಾನ ತಿಳಿಸಿ

ನನ್ನ ಮತ್ತು ಚಾ.ಸಾ.-3 ರ ಸಮಕ್ಷಮ ಬೆಳಿಗ್ಗೆ 10-00 ಗಂಟೆಯಿಂದ 11-00 ಗಂಟೆಯವರೆಗೆ ನಿ.ಪಿ.-1 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ ಘಟನಾ ಸ್ಥಳದಲ್ಲಿ ನಿ.ಪಿ.-2 ರಂತೆ ನಕ್ಷೆ ತಯಾರಿಸಿದ್ದು ನಾನು ನಿ.ಪಿ.-1 ಮತ್ತು 2 ಕ್ಕೆ ನಿ.ಪಿ.-1(ಬಿ) ಮತ್ತು 2(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಕೇಸಿನ ವಿದ್ಯಮಾನ ಗೊತ್ತಿದ್ದರೂ ಸಹ ಮತ್ತು ಪೋಲೀಸರು ನನ್ನ ಸಮಕ್ಷಮ ನಿ.ಪಿ.-1 ರಂತೆ ಸ್ಥಳ ಮಹಜರ್ ಮತ್ತು ನಿ.ಪಿ.-2 ರಂತೆ ನಕ್ಷೆ ತಯಾರಿಸಿದ್ದರೂ ಸಹ ಆರೋಪಿತರರಿಗೆ ಸಹಾಯ ಮಾಡಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u>- ಆರೋಪಿತರ ಪರ ಶ್ರೀ ಎಸ್**.**ಕೆ**.** ವಕೀಲರಿಂದ.

ಯಾವುದೇ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ**- ಇಲ್ಲ.**</u>

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಿಸಲಾಯ್ತು.)**

**(ಸಾಕ್ಷಿಗೆ ಓದಿ , ತಿಳಿಸಿ ಹೇಳಿದಾಗ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ .)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.

**ಸಿ.ಸಿ. ನಂ.292/2023**